**ದಿನಾಂಕಃ 31.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : 1 ನೇ ಪ್ರತಿವಾದಿಯ ಪರ ಶ್ರೀ ಪಿ.ವಿ.ಪಿ. ವಕೀಲರಿಂದಃ**

1. ನಾನು ಪಾಲುವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದೇನೆ. ನನ್ನ ತಂದೆ ಮೀಟ್ಯಾ ನಾಯ್ಕ ಇವರಿಗೆ 6 ಜನ ಮಕ್ಕಳು ಎಂದರೆ ಸರಿ. ನಾನು ಈ ದಾವೆಯನ್ನು 3 ಆಸ್ತಿಗಳ ಬಗ್ಗೆ ಸಲ್ಲಿಸಿದ್ದೇನೆ. ಈ ಆಸ್ತಿಗಳು ನನ್ನ ತಂದೆಗೆ ಅವರ ಸಹೋದರರ ನಡುವೆ ವಿಭಾಗ ಮಾಡಿಕೊಂಡಾಗ ಬಂದಿದ್ದವು. ನನ್ನ ತಂದೆ 1986 ರಲ್ಲಿ ಮೃತಪಟ್ಟಿದ್ದಾರೆ. ನನ್ನ ತಾಯಿ ದುರ್ಗಾಬಾಯಿ 2006 ರಲ್ಲಿ ಮೃತಪಟ್ಟಿದ್ದಾರೆ. ನನ್ನ ತಮ್ಮ ಚಂದ್ರಾ ನಾಯ್ಕ 2013 ರಲ್ಲಿ ಮೃತಪಟ್ಟಿದ್ದಾನೆ. ನನ್ನ ಮೃತ ತಮ್ಮ ಚಂದ್ರಾ ನಾಯ್ಕ ಈ ದಾವೆಯ 6 ನೇ ಪ್ರತಿವಾದಿ ಚಿದಾನಂದರವರಿಗೆ ದಾವಾ ಐಟಂ ನಂ. 2 ನ್ನು ಮಾರಾಟ ಮಾಡಿರುವುದನ್ನು ಪ್ರಶ್ನಿಸಿ 1 ನೇ ಪ್ರತಿವಾದಿ ಶಿವರಾಮ ನಾಯ್ಕ ಇದೇ ನ್ಯಾಯಾಲಯದಲ್ಲಿ ಇನ್ನೊಂದು ದಾವೆ ಹಾಕಿದ್ದರು ಎಂದರೆ ಸರಿ. ಸದರಿ ಓ.ಎಸ್. ನಂ. 57/2018 ರಲ್ಲಿ ದಾವಾ ಐಟಂ ನಂ. 2 ಒಟ್ಟು ಕುಟುಂಬದ ಆಸ್ತಿ ಎಂದು ತೀರ್ಮಾನ ಮಾಡಿದ್ದರು ಎಂದರೆ ಸರಿ. ನಾನು 1 ನೇ ಪ್ರತಿವಾದಿಯನ್ನು ಯಾವತ್ತೂ ದಾವಾ ಸ್ವತ್ತುಗಳಲ್ಲಿ ಭಾಗ ಕೇಳಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗಿರುವ ಹಿಸ್ಸೆಯಷ್ಟೇ 1 ನೇ ಪ್ರತಿವಾದಿಗೆ ಕೂಡಾ ಹಿಸ್ಸೆಯ ಹಕ್ಕು ಇರುತ್ತದೆ ಎಂದರೆ ಸರಿ.

**ಪಾಟೀ ಸವಾಲು : 6 ನೇ ಪ್ರತಿವಾದಿಯ ಪರ ಶ್ರೀ ಜಿ.ಕೆ.ಜಿ. ವಕೀಲರಿಂದಃ**

2. 2006 ರಲ್ಲಿ ನಮ್ಮ ತಾಯಿ ಮೃತಪಟ್ಟ ನಂತರ ನಾನು ಮತ್ತು ನನ್ನ ಸಹೋದರರು ಪೌತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಿಕೊಂಡಿಲ್ಲವೇ? ಎಂದರೆ ಇಲ್ಲ. ನನ್ನ ತಂದೆ-ತಾಯಿ ತೀರಿಕೊಂಡ ನಂತರ ದಾವಾ ಸ್ವತ್ತುಗಳಲ್ಲಿ ನಾನೂ ಕೂಡಾ ನನ್ನ ಹಸೋದರರ ಜೊತೆ ಜಂಟಿ ಸ್ವಾಧೀನ ಹೊಂದಿರುವ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೀನಾ? ಎಂದರೆ ಮಾಡಿಲ್ಲ. 1 ನೇ ಪ್ರತಿವಾದಿ ನಮ್ಮೆಲ್ಲರ ವಿರುದ್ಧ ಸಲ್ಲಿಸಿದ್ದ ಓ.ಎಸ್. ನಂ. 57/2018 ರಲ್ಲಿ ನನಗೆ ಕೋರ್ಟಿನಿಂದ ನೋಟೀಸ್ ಬಂದಿತ್ತು ಎಂದರೆ ಸರಿ. ನಾನು ಮತ್ತು ನನ್ನ ಎಲ್ಲಾ ಕುಟುಂಬ ಸದಸ್ಯರು ಆ ದಾವೆಯಲ್ಲಿ ಒಬ್ಬ ವಕೀಲರನ್ನೇ ನೇಮಕ ಮಾಡಿಕೊಂಡಿದ್ದೆವು ಎಂದರೆ ಸರಿ. ಆ ದಾವೆಯಲ್ಲಿ ನಾನು ಮತ್ತು ನನ್ನ ಉಳಿದ ಸಹೋದರರು ಯಾರೂ ಕೂಡಾ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳು, ಅದರಲ್ಲಿ ನಮಗೆ ಹಿಸ್ಸೆ ಹಕ್ಕು ಇದೆ ಎಂದು ನಮ್ಮ ಪ್ರತಿವಾದ ಪತ್ರಗಳನ್ನು ಸಲ್ಲಿಸಿರಲಿಲ್ಲ ಎಂದರೆ ಸರಿ . ನನ್ನ ಸಹೋದರ ಶಿವರಾಮ ನಾಯ್ಕ ಸದರಿ ದಾವೆಯ ತೀರ್ಪಿನ ವಿರುದ್ಧ ಆರ್.ಎ.ನಂ.5006/2019 ರಂತೆ ಹೊಸಪೇಟೆಯ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದ ಎಂದರೆ ಸರಿ. ಅಪೀಲಿನಲ್ಲಿ ಕೂಡಾ ನಾನು ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗಿದ್ದೆ ಎಂದರೆ ಸರಿ. ಓ.ಎಸ್. ನಂ. 57/2018 ರಲ್ಲಿ 1 ನೇ ಪ್ರತಿವಾದಿ ಯಾವ ಯಾವ ದಾಖಲೆಗಳನ್ನು ಹಾಜರು ಮಾಡಿದ್ದನೆಂದು ನನ್ನ ವಕೀಲರ ಮೂಲಕ ನಾನು ತಿಳಿದುಕೊಂಡಿದ್ದೆ ಎಂದರೆ ಸರಿ. ಅಪೀಲು ನ್ಯಾಯಾಲಯದಲ್ಲಿ ನಾನು ಕೆಳಗಿನ ನ್ಯಾಯಾಲಯದಲ್ಲಿ ಪ್ರತಿವಾದ ಪತ್ರ ಸಲ್ಲಿಸಿಲ್ಲ ಆದ್ದರಿಂದ ಪ್ರತಿವಾದ ಪತ್ರ ಸಲ್ಲಿಸಲು ಅವಕಾಶ ಕೊಡಿ ಎಂದು ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸರಿ. 6 ನೇ ಪ್ರತಿವಾದಿಯ ಕ್ರಯ ಪತ್ರವನ್ನು ನಾನು ಪರಿಶೀಲನೆ ಮಾಡಿದ್ದುಂಟೇ ? ಎಂದರೆ ಮಾಡಿಲ್ಲ. ನಮ್ಮ ಸಹೋದರರ ಪೈಕಿ ನನ್ನ ತಮ್ಮ ಚಂದ್ರಾ ನಾಯ್ಕ ಮಾತ್ರ ಊರಿನಲ್ಲಿ ವಾಸ ಮಾಡುತ್ತಿದ್ದ ಎಂದರೆ ಸರಿ. 1 ಮತ್ತು 3 ನೇ ಪ್ರತಿವಾದಿಗಳು ದಾವಣಗೆರೆ ಹಾಗೂ ಹೊಸಪೇಟೆಯಲ್ಲಿ ಉದ್ಯೋಗ ಮಾಡುತ್ತಿದ್ದರು. ಚಂದ್ರಾ ನಾಯ್ಕ ಮಾತ್ರ ಊರಿನಲ್ಲಿದ್ದುಕೊಂಡು ವ್ಯವಸಾಯ ಮಾಡುತ್ತಿದ್ದ ಎಂದರೆ ಸರಿ. 2 ಮತ್ತು 4 ನೇ ಪ್ರತಿವಾದಿ ಹಾಗೂ ನನ್ನನ್ನು ಒಳ್ಳೆಯ

ಸ್ಥಿತಿವಂತರಿಗೇ ಕೊಟ್ಟು ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ಚಂದ್ರಾ ನಾಯ್ಕನೇ ಮನೆಯ ಕರ್ತನಾಗಿದ್ದುಕೊಂಡು ಎಲ್ಲಾ ವ್ಯವಹಾರಗಳನ್ನು ನಿರ್ವಹಣೆ ಮಾಡುತ್ತಿದ್ದ ಎಂದರೆ ಹೌದು, ನಾವೂ ಕೂಡಾ ಹೋಗಿ ಬರುತ್ತಿದ್ದೆವು. ಕುಟುಂಬದ ಖರ್ಚುಗಳಿಗೋಸ್ಕರ ನಾವೆಲ್ಲರೂ ಜಂಟಿಯಾಗಿ ದಿನಾಂಕ 21.02.2011 ರಂದು ಸರ್ವೇ ನಂ. 145 ಬಿ ಯಲ್ಲಿರುವ 9 ಎಕರೆ 67 ಸೆಂಟ್ಸ್ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೆವು ಎಂದರೆ ಸರಿ. ಮೃತ ಚಂದ್ರಾ ನಾಯ್ಕ ದಿನಾಂಕ 21.07.2011 ರಂದು ಪಾಲುವಿಭಾಗ ಪತ್ರ ಮಾಡಿಕೊಂಡು ಐಟಂ ನಂ. 2 ರ ಖಾತೆಯನ್ನು ಎಂ.ಆರ್ ನಂ. 16/2011-12 ರಂತೆ ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ದಿನಾಂಕದಿಂದಲೂ ಐಟಂ ನಂ. 2 ಚಂದ್ರಾ ನಾಯ್ಕನ ಪ್ರತ್ಯೇಕ ಸ್ವಾಧೀನಾನುಭದಲ್ಲಿ ಇದ್ದು, ಅದರ ಮೇಲೆ ಉಳಿದ ಸಹೋದರ ಸಹೋದರಿಯರಿಗೆ ಯಾರಿಗೂ ಜಂಟಿ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವವರೆಗೆ ನಾನು 2011 ರ ಪಾಲುವಿಭಾಗ ಪತ್ರ ಮತ್ತು ಹಕ್ಕು ಬದಲಾವಣೆ ಆದೇಶವನ್ನು ಎಲ್ಲಿಯೂ ಪ್ರಶ್ನೆ ಮಾಡಿರಲಿಲ್ಲ ಎಂದರೆ ಸರಿ. 1 ಮತ್ತು 4 ನೇ ಪ್ರತಿವಾದಿಗಳು ನೌಕರಿಯಲ್ಲಿದ್ದರೂ ಮೃತ ಚಂದ್ರಾ ನಾಯ್ಕನಿಗೆ ಯಾವುದೇ ರೀತಿಯಲ್ಲಿ ಸಹಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಹೋದರಿಯರು ಎಲ್ಲರೂ ಸ್ಥಿತಿವಂತರನ್ನು ಮದುವೆಯಾಗಿ ಗಂಡನ ಮನೆಗಳಲ್ಲಿ ಇದ್ದಿದ್ದರಿಂದ ಮತ್ತು 1 ಹಾಗೂ 4 ನೇ ಪ್ರತಿವಾದಿ ನೌಕರಿಯಲ್ಲಿ ಇದ್ದಿದ್ದರಿಂದ ಚಂದ್ರಾ ನಾಯ್ಕ ಒಬ್ಬನೇ ವ್ಯವಸಾಯ ಮಾಡುತ್ತಿದ್ದರಿಂದ ನಾವೆಲ್ಲರೂ ಜಮೀನುಗಳನ್ನು ಆತನೇ ಮಾಡಿಕೊಂಡಿರಲಿ ಎಂದು ಸುಮ್ಮನೆ ಇದ್ದೆವು ಎಂದರೆ ಹಾಗೇನೂ ಇಲ್ಲ, ವ್ಯವಸಾಯ ಮಾಡುತ್ತಿದ್ದಾನೆ ಆದ್ದರಿಂದ ಆತನೇ ನೋಡಿಕೊಳ್ಳಲಿ ಎಂದು ಬಿಟ್ಟಿದ್ದೆವು. 1 ಮತ್ತು 3 ನೇ ಪ್ರತಿವಾದಿಗಳು ಇನ್ನೂ ನಿವೃತ್ತರಾಗಿಲ್ಲ. ನಮ್ಮ ಒಟ್ಟು ಕುಟುಂಬಕ್ಕೆ ಈ 3 ಜಮೀನುಗಳನ್ನು ಹೊರತುಪಡಿಸಿ ಯಾವುದೇ ಮನೆಯ ಆಸ್ತಿಗಳು ಇರುವುದಿಲ್ಲ. ನನ್ನ ತಮ್ಮ ಮೃತ ಚಂದ್ರಾ ನಾಯ್ಕನಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇರುತ್ತಾರೆ. ಅವರು ಹೆಸರುಗಳು ಅನನ್ಯ ಮತ್ತು ಗುಡ್ಡು (ಅಡ್ಡ ಹೆಸರು ಹೇಳಿದ್ದಾರೆ) ಎಂದು ಇರುತ್ತದೆ. ಅನನ್ಯಳಿಗೆ 20 ವರ್ಷ ವಯಸ್ಸು ಇರುತ್ತದೆ. ಗುಡ್ಡುಗೆ 13 ವರ್ಷ ಇರುತ್ತದೆ. ಅವರಿಬ್ಬರನ್ನೂ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮೃತಪಟ್ಟ ನಂತರ ದಿನಾಂಕ 21.07.2007 ರಂದು ಪಾಲುವಿಭಾಗ ಮಾಡಿಕೊಂಡ ನಂತರ ದಾವಾ ಸಲ್ಲಿಸುವವರೆಗೆ ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದೆವೆಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾವೆಲ್ಲಾ ಊರಿಗೆ ಹೋದಾಗ ಚಂದ್ರಾ ನಾಯ್ಕನೇ ನಮ್ಮ ಎಲ್ಲಾ ಖರ್ಚುಗಳನ್ನು ನೋಡಿಕೊಳ್ಳುತ್ತಿದ್ದ ಎಂದರೆ ಸರಿ. ಆದ್ದರಿಂದ ಕುಟುಂಬದ ಖರ್ಚುಗಳಿಗೋಸ್ಕರ ನನ್ನ ತಮ್ಮ ಚಂದ್ರಾ ನಾಯ್ಕ ಐಟಂ ನಂ. 2 ನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಮಾಡುವ ಬಗ್ಗೆ ನಮ್ಮೆಲ್ಲರಿಗೂ ಒಪ್ಪಿಗೆ ಕೂಡಾ ಇತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವೆ ಸಲ್ಲಿಸಿ ಡಿಕ್ರಿ ಪಡೆದುಕೊಂಡಿರುವುದನ್ನು ದುರುಪಯೋಗ ಮಾಡಿಕೊಳ್ಳಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.